**ಓ ಎಸ್ ನಂಃ 799/2014**

**ಡಿ. ಡಬ್ಲ್ಯೂ ಃ 1**

**ದಿಃ 30.11.2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲು ಃ ವಾದಿ ಪರ ಶ್ರೀ ಎಸ್ ಜಿ ಯು ವಕೀಲರಿಂದ ಃ**

ದಾವಾ ಸ್ವತ್ತಿನಲ್ಲಿ ವಾದಿಯು ರಾಗಿ ಮತ್ತು ಮಾವು ಬೆಳೆದಿದ್ದಾರೆ. ಅದರಲ್ಲಿ 20 ವರ್ಷಗಳ ಮಾವಿನ ಮರಗಳಿವೆ. ಅದನ್ನು ವಾದಿಗಳೇ ಬೆಳೆದಿದ್ದಾರೆ. ಮರಿಹೊನ್ನಯ್ಯ ಇವರ ವಂಶಸ್ಥರು ನನಗೆ ಗೊತ್ತು. ಕೆಂಪಯ್ಯ ಇವರಿಗೆ ದೊಡ್ಡಹೊನ್ನಯ್ಯ ಮತ್ತು ಚಿಕ್ಕಹೊನ್ನಯ ಎಂಬ ಇಬ್ಬರು ಮಕ್ಕಳು ಎಂದರೆ ನನಗೆ ಗೊತ್ತಿಲ್ಲ. ನಮ್ಮ ತಂದೆಗೆ ಕ್ರಯಕ್ಕೆ ಕೊಟ್ಟ ಮರಿಹೊನ್ನಯ್ಯ ಇವರು ದೊಡ್ಡಹೊನ್ನಯ್ಯ ಇವರ ಮಗ ಇರುತ್ತಾರೆ. ದೊಡ್ಡಹೊನ್ನಯ್ಯ ಇವರಿಗೆ 6 ಜನ ಮಕ್ಕಳೆಂದು ಗೊತ್ತು. ಚಿಕ್ಕಹೊನ್ನಯ್ಯ ಇವರಿಗೆ 8 ಜನ ಮಕ್ಕಳೆಂದರೆ ಸರಿ. ನಿ ಡಿ 1 ರ ಸ್ವತ್ತಿನಲ್ಲಿ ಮರಿಹೊನ್ನಯ್ಯ, ಚಿಕ್ಕಹೊನ್ನಯ್ಯ ಮತ್ತು ದೊಡ್ಡಹೊನ್ನಯ್ಯ ಇವರು ಸ್ವಾಧೀನದಲ್ಲಿಲ್ಲ ಎಂದರೆ ಸರಿ. ನಿ ಡಿ 1 ರಲ್ಲಿ 15 ಎಕರೆ 38 ಗುಂಟೆ ಜಮೀನಿದೆ ಎಂದರೆ ಸರಿ. ಇದೇ ಸ.ನಂ. ನಲ್ಲಿ ವಾದಿಗಳು ಮಾವು ಮತ್ತು ರಾಗಿ ಬೆಳೆ ಬೆಳೆದಿದ್ದಾರೆ ಎಂದರೆ ಸರಿ.

**ಮರುವಿಚಾರಣೆ ಃ ಇಲ್ಲ**

**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು,**

**ಮಾಗಡಿ.**